# ಧರ್ಮಕಾಮ

ಜೀವನದ ಚತುರ್ವರ್ಗ ಪುರುಷಾರ್ಥದಲ್ಲಿ ಕಾಮವೂ ಒಂದು. ಧರ್ಮ, ಅರ್ಥ ಮತ್ತು ಕಾಮ ಈ ಮೂರನ್ನು 'ತ್ರಿವರ್ಗ' ಎಂದು ಕರೆದರು. ನಮ್ಮ ಜೀವನದ ಫಲಸಾಧನೆಗೆ ಕಾಮವೂ ಬೇಕು; ಅರ್ಥವೂ ಬೇಕು. ಕಾಮ 'ಧರ್ಮಕಾಮ'ವಾಗಿರಬೇಕು ಅಷ್ಟೆ. ಕಾಮಕ್ಕೆ ಇಮ್ಮುಖ ಬಲಗಳುಂಟು. ಒಂದು ಬಾಹ್ಯಮುಖ ಮತ್ತೊಂದು ಅಂತರ್ಮುಖ. ಬಾಹ್ಯಮುಖ ಗೌಣ; ಅಂತರ್ಮುಖ ಪ್ರಾಧಾನ್ಯ. ಈ ಎಚ್ಚರವು 'ಧರ್ಮಕಾಮ'ಕ್ಕೆ ಸುಗಮಸ್ಥಿತಿಯನ್ನು ತಂದುಕೊಡುತ್ತದೆ. ಕಾಮ ಅಂತರ್ಮುಖ ಆದಾಗ 'ಧರ್ಮಕಾಮ' ಅದು ಸ್ವಾತಂತ್ರ್ಯ. ಇಲ್ಲಿ ಸ್ವೈರತೆಗೆ ಅವಕಾಶವಿಲ್ಲ. ಕಾಮ ಒಂದು ಶಕ್ತಿ. ಅದು ದುರ್ಬಲರ ಕೈಗೆ ಸಿಕ್ಕಾಗ ನರಕವಾಗುತ್ತದೆ. ಸಮರ್ಥರ ಕೈಗೆ ಸಿಕ್ಕಾಗ ಸ್ವರ್ಗವಾಗುತ್ತದೆ. ಇದು ಕಾಮದ ಹರವು. ಜಗತ್ತಿನಲ್ಲಿ ಕಾಮ ಕುರಿತು ನಡೆದಷ್ಟು ಜಿಜ್ಞಾಸೆ ಬೇರಾವುದಕ್ಕೂ ನಡೆದಿಲ್ಲ. ಪೂರ್ವದ ವಿಚಾರಧಾರೆಯಲ್ಲಿ ವಾತ್ಸಾಯನ ಇದ್ದಾನೆ. ಪಶ್ಚಿಮದ ವಿಚಾರಧಾರೆಯಲ್ಲಿ ಸಿಗ್ಮಂಡ್ ಫ್ರಾಯ್ಡ್ ಇದ್ದಾನೆ. ವಾತ್ಸಾಯನನು ಕಾಮದರ್ಶನ ಕಂಡ ಕ್ರಾಂತದರ್ಶಿಯಾದರೆ; ಫ್ರಾಯ್ಡ್ ನವದರ್ಶನವನ್ನು ಕೊಟ್ಟ ಋತದರ್ಶಿ. ಇವರಿಬ್ಬರ ವಿಚಾರಗಳಿಗೆ ಅವರದೇ ಆದ ದೃಷ್ಟಿಸೃಷ್ಟಿಗಳಿವೆ. ವಾತ್ಸಾಯನನಿಗೆ ಲೈಂಗಿಕತೆ ಎಂಬುದು ಕಾಲುದಾರಿ. ಆದರೆ, ಫ್ರಾಯ್ಡ್‌ಗೆ ಅದು ಸರ್ವಮೂಲ ಪ್ರಚೋದನೆ.

ಪ್ರಾಚೀನ ಭಾರತೀಯರು ಲೈಂಗಿಕ ವ್ಯವಹಾರ ಒಂದು ಜೈವಿಕವ್ಯವಸ್ಥೆಯೆಂದು ತಿಳಿದಿದ್ದರು. ಇಷ್ಟು ಮಾತ್ರವಲ್ಲ ಜೀವಂತ ಹಾಗೂ ಅಭಿವೃದ್ಧಿಶೀಲ ಪ್ರಕ್ರಿಯೆ ಎಂದೂ ತಿಳಿದಿದ್ದರು. ಬದುಕಿನ ವ್ಯವಸ್ಥೆಯಲ್ಲಿ ಅದಕ್ಕೊಂದು ಪ್ರಾಧಾನ್ಯತೆ ಕಲ್ಪಿಸಿದ್ದರು! ಕಾಮವು ತುಚ್ಛವಲ್ಲ. ಅದು ಬಾಳ್ವೆಯ ದಾರಿಯಲ್ಲಿ ಸಾಗುವ ಸ್ವರ್ಗೀಯ ಕ್ರಿಯೆಯೆಂದೇ ಪೂರ್ವಿಕರು ತಿಳಿದಿದ್ದರು. ಕಾಮ ಕೇವಲ ದೇಹಕ್ಕೆ ಸಂಬಂಧಿಸಿದ್ದಲ್ಲ. ಅದು ಮನಸ್ಸಿಗೂ ಸಂಬಂಧಿಸಿದ್ದು. ಅದಕ್ಕಾಗಿ ಕಾಮದೇವನನ್ನು 'ಮನಸಿಜ' ಎಂದು ಪೂರ್ವಿಕರು ಕರೆದರು. ಈ ಸಂಗತಿಯನ್ನು ಒಂದು ಪ್ರಸಂಗದಿಂದ ವಿವರಿಸಿಕೊಳ್ಳಬಹುದು. ಅದು ಬಹು ಪ್ರಾಚೀನಕಾಲ. ಉಪನಿಷತ್ಕಾಲವೆಂದರೂ ಸರಿ. ಆ ಕಾಲದಲ್ಲಿ ಭಾರದ್ವಾಜರೆಂಬ ಋಷಿಶ್ರೇಷ್ಠರು ಇದ್ದರು. ಅವರ ಆಶ್ರಮವನ್ನು 'ಭಾರದ್ವಾಜಾಶ್ರಮ'ವೆಂದು ಕರೆಯುತ್ತಿದ್ದರು. ಒಂದು ಸಂಜೆ ಭಾರದ್ವಾಜರು ಪ್ರವಚನ ಮುಗಿಸಿ ಆಹ್ನಿಕಕ್ಕೆ ಏಳುವವರಿದ್ದರು. ಇಬ್ಬರು ಸನ್ಯಾಸಿಗಳು ಅವರನ್ನು ಕಂಡು ಮಾತನಾಡಲು ಬಂದರು. 'ನಾವು ಕಾಶ್ಮೀರದಿಂದ ಬಂದಿದ್ದೇವೆ' ಎಂದರು. ಆಗ ಭಾರದ್ವಾಜರು 'ಆಶ್ರಮದ ಅತಿಥಿಗೃಹದಲ್ಲಿ ಉಳಿದುಕೊಳ್ಳಿ. ನನ್ನಿಂದ ಏನಾಗಬೇಕು? ನೀವು ಆದೇಶಿಸಬೇಕು' ಎಂದರು. ಆಗ ಆ ಸನ್ಯಾಸಿಗಳಿಬ್ಬರು 'ನಾವು ಸನ್ಯಾಸವನ್ನು ಅಂಗೀಕರಿಸಿದ್ದೇವೆ. ನಾವು ಬ್ರಹ್ಮಚರ್ಯವನ್ನು ಸಾಧಿಸಬೇಕಾಗಿದೆ. ತಾವು ನಮಗೆ ಬ್ರಹ್ಮಚರ್ಯವನ್ನು ಕರುಣಿಸಬೇಕು' ಎಂದರು. ಭಾರದ್ವಾಜರು ಆ ಸನ್ಯಾಸಿಗಳ ಮಾತು ಕೇಳಿ ಚಕಿತರಾಗಿ ಮುಗುಳ್ನಕ್ಕು 'ಆಯಿತು. ಬೆಳಿಗ್ಗೆ ಶಿಷ್ಯರು ಬರುವ ಮುನ್ನ ನಮ್ಮ ಪೂಜಾಗೃಹಕ್ಕೆ ಬನ್ನಿ' ಎಂದರು. ಆಗ ಅತಿಥಿ ಸನ್ಯಾಸಿಗಳಿಬ್ಬರು ಪರಸ್ಪರ ನೋಡಿಕೊಂಡರು. ಅವರಲ್ಲಿ ಒಬ್ಬ ಮುಜುಗರದಿಂದ 'ಭಗವನ್, ತಮ್ಮ ಪೂಜಾಗೃಹದಲ್ಲಿ ಹೆಂಗಸರು ಇರುವುದಿಲ್ಲವಷ್ಟೆ?' ಎಂದು ಕೇಳಿದ. ಆಗ ಭಾರದ್ವಾಜರು ನಿರ್ವಿಕಾರವಾಗಿ 'ಯಾಕೆ ಇದ್ದರೇನಾಗುತ್ತದೆ?' ಎಂದರು. ಆಗ ಅವರಲ್ಲೊಬ್ಬ 'ನಮಗೆ ಬರಲು ಸಾಧ್ಯವಿಲ್ಲ. ನಮಗೆ ಬೇಕಾದದ್ದು ಬ್ರಹ್ಮಚರ್ಯ. ಸ್ತ್ರೀಯರೇ ಅಲ್ಲಿರುವಾಗ ನಾವು ಅದನ್ನು ಪಡೆಯುವುದಾದರೂ ಹೇಗೆ? ನಾವು ಬರುವುದೇ ಇಲ್ಲ. ಸ್ತ್ರೀಯರಿದ್ದರೆ ಬ್ರಹ್ಮಚರ್ಯ ಹೇಗೆ ಉಳಿದೀತು. ಸ್ತ್ರೀಯರು ಬ್ರಹ್ಮಚರ್ಯಕ್ಕೆ ನಿಷಿದ್ಧ. ಸ್ತ್ರೀಯರು ಪೂಜಾಗೃಹದಲ್ಲಿದ್ದರೆ, ನಾವು ಬರಲಾರೆವು. ನಮಗೆ ಬ್ರಹ್ಮಚರ್ಯಬೇಕು'. ಎಂದು ಅವರಿಬ್ಬರು ಅಲವತ್ತುಕೊಂಡರು. ಆಗ ಭಾರದ್ವಾಜರು 'ನಿಮಗೆ ತಾಯಿ ಇದ್ದಾಳಲ್ಲವೆ?' ಎಂದರು. ಅವರಿಬ್ಬರಲ್ಲಿ ಒಬ್ಬ 'ಭಗವನ್ ನನಗೆ ತಾಯಿ ಇದ್ದಾಳೆ. ನನ್ನ ಗೆಳೆಯನ ತಾಯಿ ಸನ್ಯಾಸ ತೆಗೆದುಕೊಂಡ ಮರುವರ್ಷ ತೀರಿಕೊಂಡಳು'. ಎಂದು ಹೇಳಿ ಮೌನವಾದ. ಆಗ "ಅಂತೂ 'ತಾಯಿ' ಎಂಬ ವಸ್ತು ಇಬ್ಬರಿಗೂ ಇದ್ದಂತಾಯಿತು. ಆ ತಾಯಿ ಹೆಂಗಸೆಂದು ನಾನು ಖಚಿತವಾಗಿ ನಂಬುತ್ತೇನೆ" ಎಂದರು. ಭಾರದ್ವಾಜರ ಮಾತಿಗೆ ಸನ್ಯಾಸಿಗಳಿಬ್ಬರು ಗಲಿಬಿಲಿಗೊಂಡರು. 'ಸನ್ಯಾಸಕ್ಕೆ ಬ್ರಹ್ಮಚರ್ಯಕ್ಕೆ ಸ್ತ್ರೀಯರು ಪ್ರತಿಬಂಧಕರಲ್ಲವೆ?' ಎಂದು ಅವರಿಬ್ಬರು ಹೇಳಿ ಮೌನವಾದರು.

ಆಗ ಭಾರದ್ವಾಜರು 'ತರುಣ ಸನ್ಯಾಸಿಗಳೆ, ನಿಮ್ಮ ರಕ್ತ, ಮಾಂಸ, ಮೂಳೆಯಲ್ಲಿ ಸ್ತ್ರೀಯರದೇ ಆದ ನಿಮ್ಮ ತಾಯಿಯ ಭಾಗಗಳೇ ಉಂಟು. ನಿಮ್ಮ ಬ್ರಹ್ಮಚರ್ಯಕ್ಕೆ ಸ್ತ್ರೀ ನಿಷೇಧವಾದರೆ ಇವನ್ನೆಲ್ಲಾ ತೊಡೆದು ಹಾಕಲು ಸಾಧ್ಯವೆ? ಸ್ತ್ರೀಯರ ಬಗ್ಗೆ ಎಷ್ಟು ಹೆದರಿಕೊಂಡಿದ್ದೀರಿ. ಅವಳನ್ನು ಕಣ್ಣಿಂದ ನೋಡಬಾರದೆಂದು ಮುಖ ತಿರುವುತ್ತೀರಿ. ನಿಮ್ಮ ಕನಸಿನಲ್ಲಿ ತರುಣಿ ಕಾಣಿಸಿಕೊಂಡಾಗ ದೂರ ಹೋಗುತ್ತೀರಾ? ಇಲ್ಲ, ಕಳ್ಳಹೆಜ್ಜೆ ಹಾಕಿ ಅವಳ ಬಳಿ ಸಾರುತ್ತೀರಾ? ಕಾಮಕ್ಕೆ ಹೆದರಿ ದೂರ ಇರಲಾರಿರಿ, ಇರಬಾರದು ಕೂಡಾ. ಕಾಮವನ್ನು ಚೆನ್ನಾಗಿ ತಿಳಿಯಿರಿ. ನಿಮ್ಮ ಎತ್ತರಕ್ಕೆ ಅದನ್ನು ಬಳಸಿ. ಅದು ಬ್ರಹ್ಮಚರ್ಯ' ಎಂದು ಹೇಳಿ ಸುಮ್ಮನಾದರು. ಭಾರದ್ವಾಜರ ಮರ್ಮಭೇದಕವಾದ ಮಾತು ಅವರಿಬ್ಬರಿಗೂ ಹೊಸಕಣ್ಣನ್ನು ಕೊಟ್ಟಿತು.

ನಾವು ಕಾಮವನ್ನು ಎತ್ತರದಲ್ಲಿಟ್ಟು ನೋಡಬೇಕಷ್ಟೆ. ನಮ್ಮ ಭಾವನೆಯಿಂದ ಅದನ್ನು ಮಲಿನಗೊಳಿಸಬಾರದು. ನಮ್ಮ ಅಂತಃಕರಣವು ತುಂಬಿರುವಾಗ ಸ್ವೈರತೆಗೆ ಅವಕಾಶವಿಲ್ಲ. ಅಲ್ಲಿ ತಾಯಿ, ತಂಗಿ, ಅಕ್ಕ ಎಲ್ಲರೂ ಎತ್ತರದಲ್ಲಿ ನಿಲ್ಲುತ್ತಾರೆ. ಇವರೆಲ್ಲ ಸ್ತ್ರೀಯರೇ. ಆದರೆ, ನೋಡುವ, ಭಾವಿಸುವ, ತಿಳಿಯುವ ಕ್ರಿಯೆಯಲ್ಲಿ ನಮ್ಮ ಭಾವಕ್ಕೆ ತಕ್ಕಂತೆ ಅವರು ಊರುತ್ತಾರೆ! ಅವರು 'ಸಂಬಂಧಗಳ' ಬಂಧದಲ್ಲಿ ನೆಲೆನಿಲ್ಲುತ್ತಾರೆ. ಕಾಮವು ಅಂತಃಕರಣದಲ್ಲಿ ಅರಳಬೇಕು. ಆಗ ಕಾಮವು 'ಧರ್ಮಕಾಮ'ದ ಪಥವಾಗಿ ನೆಲೆನಿಲ್ಲುತ್ತದೆ. ಆದರೆ, ನಮ್ಮ ಭಾವಭಾವನೆಗಳನ್ನು ನಾವು ಕೆಡಿಸಿಕೊಂಡು ಕುಳಿತಿದ್ದೇವೆ. ನಾವು ಇದರಿಂದ ಪಾರಾಗದೆ 'ಕಾಮ'ವು 'ದೇವಪಥ'ವಾಗಲು ಸಾಧ್ಯವಿಲ್ಲ. ನರನು ಮಾನವನಾಗುವ ಮತ್ತೊಂದು ಬಗೆಯ ಪ್ರಕ್ರಿಯೆ ಇಲ್ಲಿದೆ ನೋಡಿ.

■ ಪುರಂಜೀವಿ

ಸಂಧಿಲಿನ್
SANDHILIN सन्धिलिन

ಗಂಟು ನೋವು, ಬೆನ್ನು ನೋವು, ಮಾಂಸ ಖಂಡಗಳ ಸೆಳೆತ, ನರ, ವಾತ ಸಂಬಂಧಿ

ನೋವಿಗೆ ಶೀಘ್ರ ಪರಿಣಾಮಕಾರಿ

CLINICALLY PROVED




- ಜಿಡ್ಡು ರಹಿತ 'ಸಂಧಿಲಿನ್' ಎಣ್ಣೆಯನ್ನು ಆಯುರ್ವೇದದ ಋಷಿಮುನಿಪ್ರಣೀತ ಶಾಸ್ತ್ರೋಕ್ತವಾಗಿ, ಅತ್ಯಾಧುನಿಕ ತಂತ್ರಜ್ಞಾನವನ್ನು ಅಳವಡಿಸಿ ತಯಾರಿಸಲಾಗಿದೆ.
- ಇದು ಗಂಟುನೋವು, ಬೆನ್ನುನೋವು, ಉಳುಕು, ಮಾಂಸ ಖಂಡಗಳ ಸೆಳೆತ, ನರ, ವಾತ ಸಂಬಂಧಿ ನೋವುಗಳಿಗೆ ಪರಿಣಾಮಕಾರಿ.
- ತ್ವಚೆಗೆ ಹಿತಕರವಾಗಿದ್ದು ಚರ್ಮ ಅಥವಾ ಬಟ್ಟೆಯ ಮೇಲೆ ಯಾವುದೇ ಜಿಡ್ಡು, ಕಲೆಗಳು ಉಂಟಾಗುವುದಿಲ್ಲ.

ತಯಾರಕರು

SDM AYURVEDA PHARMACY

ISO / GMP CERTIFIED

ಶ್ರೀ ಧರ್ಮಸ್ಥಳ
ಮಂಜುನಾಥೇಶ್ವರ ಆಯುರ್ವೇದ ಫಾರ್ಮಸಿ
ಕುತ್ಪಾಡಿ – 574 118, ಉಡುಪಿ ಜಿಲ್ಲೆ, ಕರ್ನಾಟಕ
Ph / Fax: 0820 - 2520852
Email: sdmaph@gmail.com

ಇದು 'SDM ಆಯುರ್ವೇದ ಫಾರ್ಮಸಿ'ಯ ಉತ್ಕೃಷ್ಟ ಗುಣಮಟ್ಟದ ಉತ್ಪನ್ನ.